O.S.764/2013
P.W.1

**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 06-04-2018.**

ಮುಂದುವರೆದ ಪಾಟೀ ಸವಾಲು ಶ್ರೀ ಎಸ್.ಎಸ್.ಪಿ. ವಕೀಲರಿಂದ ಃ

ದಾವಾ ಸ್ವತ್ತು ನನ್ನ ಹಿಸ್ಸೆಗೆ ಬಂದ ನಂತರ ನನ್ನ ಹೆಸರಿಗೆ ಖಾತೆಯಾಗಿದೆ. ಸದರಿ ಖಾತೆಯು 2006 ರವರೆಗೆ ನನ್ನ ಹೆಸರಿನಲ್ಲಿ ಇತ್ತು. ನಂತರ ಬೇರೆಯವರ ಹೆಸರಿಗೆ ಖಾತೆಯಾಗಿರುವುದನ್ನು ನಾನು 2013 ರಲ್ಲಿ ನೋಡಿದ್ದೇನೆ. ಸದರಿ ಖಾತೆಯನ್ನು ನಾನು ಪ್ರಶ್ನಿಸಿಲ್ಲ. ದಾವಾ ಸ್ವತ್ತು ಹಿರೀಸಾವೆ ಮತ್ತು ಶ್ರವಣಬೆಳಗೊಳದ ಮುಖ್ಯ ರಸ್ತೆಯಲ್ಲಿ ಇದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ನಾನು ಹೆಚ್ಚಾಗಿ ಓಡಾಡುವುದಿಲ್ಲ. ನಾನು 2006 ರಿಂದ 2013 ರವರಗೆ ದಾವಾ ಸ್ವತ್ತಿನ ಕಡೆ 2-3 ಬಾರಿ ಹೋಗಿರುತ್ತೇನೆ. ಆ ಸಮಯದಲ್ಲಿ ಪ್ರತಿವಾದಿ ಕಟ್ಟಡ ಕಟ್ಟುವುದನ್ನು ಗಮನಿಸಿಲ್ಲ. ಪ್ರತಿವಾದಿ 2006 ಇಸವಿನಲ್ಲಿ ದಾವಾ ಸ್ವತ್ತಿನ ಸ್ವಾಧೀನಕ್ಕೆ ಪ್ರತಿವಾದಿಗಳು ಯಾವಾಗ ಬಂದಿದ್ದಾರೆ ಎಂದು ಗೊತ್ತಿಲ್ಲ. ಪ್ರತಿವಾದಿಗಳು ದಿನಾಂಕಃ06.02.1995 ರಿಂದ ದಾವಾ ಸ್ವತ್ತಿನಲ್ಲಿ ಪ್ರತಿಕೂಲ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪೂರ್ವ ಭಾಗಕ್ಕೆ ಪ್ರತಿವಾದಿಯ ಮಂಜೂರಾಗಿರುವ ನಿವೇಶನ ಇದೆ ಎಂದರೆ ಸರಿ. 1999 ರಲ್ಲಿ ಪ್ರತಿವಾದಿಗಳು ಮಂಜೂರಾಗಿರುವ ನಿವೇಶಗಳನು ಹಾಗೂ ದಾವಾ ಸ್ವತ್ತು ಎರಡಕ್ಕೂ ಸೇರಿಸಿ ಒಟ್ಟಾಗಿ ಮಳಿಗೆ ಕಟ್ಟಲು ಅನುಮತಿ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಸ್ವತ್ತಿನಲ್ಲಿ ಪ್ರತಿವಾದಿ ನನಗೆ ಹಾಗೂ ಇತರರಿಗೆ ಎಲ್ಲರಿಗೂ ತಿಳಿಯದ ಆಗೆ ನನ್ನ ಹಕ್ಕಿಗೆ ವಿರುದ್ಧವಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿ ನೌಕರರ ವಿರುದ್ಧ ನಾನು ಯಾವುದೆ ಕಾನೂನು ಕ್ರಮ ತೆಗೆದುಕೊಂಡಿಲ್ಲ. ನಿಶಾನೆ ಪಿ-10 ನ್ನು ಈ ಕೇಸಿಗೋಸ್ಕರ ಪಂಚಾಯಿತಿ ಅಧಿಕಾರಿಗಳ ಜೊತೆ ಶಾಮಿಲಾಗಿ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಪ್ರತಿಕೂಲ ಸ್ವಾಧೀನದ ಮೂಲಕ ತಮ್ಮ ಹಕ್ಕನ್ನು ದೃಡೀಕರಿಸಿದ್ದು, ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ವಿರುದ್ಧ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಕಟ್ಟಡ ಕಟ್ಟಿರುವ ಹಾಗೂ ಖಾತೆಯಾಗಿರುವ 2013 ರ ಹಿಂದೆ ತಿಳಿದಿದ್ದರೂ ಸಹ 2013 ರಲ್ಲಿ ತಿಳಿದು ಬಂತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

*ಮರು ವಿಚಾರಣೆ ಇಲ್ಲ.*

O.S.764/2013
P.W.1

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.ಸ.ಮಾ,**

***(ಎಸ್.ಚಿನ್ನಸ್ವಾಮಿ)***
**ಅಧಿಕ ಸಿವಿಲ್ ಜಡ್ಜ್ ಮತ್ತು *ಜೆ.ಎಂ.ಎಫ್.ಸಿ.,***
***ಚನ್ನರಾಯಪಟ್ಟಣ***